**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 54/2022 ಪಿ.ಡಬ್ಲ್ಯೂಃ 13

ಸಿ.ಡಬ್ಲ್ಯೂಃ 21

| | |
|---|---|
| ಸಾಕ್ಷಿದಾರರ ಹೆಸರು | ಎಸ್. ವಿಜಯ ಪ್ರಸಾದ್ |
| ತಂದೆಯ ಹೆಸರು | ಎಸ್. ಆನಂದ |
| ವಯಸ್ಸು | 54 ವರ್ಷ |
| ಉದ್ಯೋಗ | ಪೊಲೀಸ್ ಉಪಾಧಿಕ್ಷಕರು , ಐ.ಜಿ.ಪಿ. ಕಚೇರಿ, ಮಂಗಳೂರು |
| ವಿಳಾಸ | ಬಂಟ್ವಾಳ |

ದಿನಾಂಕಃ 03-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ದಿನಾಂಕ 05-06-2021 ರಿಂದ 01-02-2023 ರವರೆಗೆ ಕಾರ್ಕಳ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕನಾಗಿ ಕೆಲಸ ಮಾಡಿರುತ್ತೇನೆ. ಪಡುಬಿದ್ರೆ ಠಾಣೆ ನನ್ನ ವ್ಯಾಪ್ತಿಯಲ್ಲಿ ಬರುತ್ತದೆ.

2) ಪಡುಬಿದ್ರೆ ಠಾಣೆಯ ಗುನ್ನೆ ನಂಬ್ರ 22/22 ರ ತನಿಖೆಯನ್ನು ದಿನಾಂಕ 26-02-2022 ರಂದು ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಆದೇಶದಂತೆ ಪಡೆದಿದ್ದೇನೆ. ಅದಕ್ಕಾಗಿ ಆದ ಆದೇಶವನ್ನು ಈಗ ನೋಡಿ **ನಿಶಾನೆ ಪಿ-19** ಎಂದು ಗುರುತಿಸಿದ್ದೇನೆ. ಅದೇ ದಿನ ಪಡುಬಿದ್ರೆ ಠಾಣೆಗೆ ಭೇಟಿ ನೀಡಿ ಚಾಸಾ-20 ಇವರಿಂದ ಮುಂದಿನ ತನಿಖೆಗಾಗಿ ಕಡತವನ್ನು ಪಡೆದುಕೊಂಡೆನು. ಅದೇ ದಿನ ಕೃತ್ಯ ನಡೆದ ಸ್ಥಳವಾದ ಕಾಪು ತಾಲೂಕು ಬಡಾ ಗ್ರಾಮದ ಪೊಲ್ಯ ಎಂಬಲ್ಲಿ ಮಧ್ಯಾಹ್ನ 12.00 ರಿಂದ 1.00 ಗಂಟೆಯವರೆಗೆ ಚಾಸಾ-1 ತೋರಿಸಿದ ಜಾಗೆಯನ್ನು ಪಂಚರಾದ ಚಾಸಾ-11 ಮತ್ತು 12 ಇವರ ಸಮಕ್ಷಮ ನಿಪಿ-2 ರ ಪಂಚನಾಮೆ ಬರೆದಿದ್ದು, ನಿಪಿ-2 ರಲ್ಲಿರುವ ನನ್ನ ಸಹಿ **ನಿಶಾನೆ ಪಿ-2(ಡಿ)** ಎಂದು ಗುರುತಿಸಿದ್ದೇನೆ. ಆ ಸಮಯದಲ್ಲಿ ಆ ಜಾಗೆಯ ನಕಾಶೆಯನ್ನು ಸಹ ಬರೆದಿದ್ದೆ. ಸದರಿ ನಕಾಶೆಯನ್ನು ಈಗ ನೋಡಿ

ಅದನ್ನು **ನಿಶಾನೆ ಪಿ-20** ಎಂದು ಗುರುತಿಸಿದ್ದೇನೆ. ಅದೇ ಸಮಯದಲ್ಲಿ ನಿಪಿ-3 ರ ಪೋಟೋಗಳನ್ನು ತೆಗೆದಿದ್ದೆ.

3) ಅದೇ ದಿನ ಚಾಸಾ-1 ರವರು ಆರೋಪಿ ಜಖಂಗೊಳಿಸಿದ್ದ ಅವರ ಮೊಬೈಲ್ ನ್ನು ಹಾಜರುಪಡಿಸಿದ್ದು, ಅದನ್ನು ಪಂಚರಾದ ಚಾಸಾ13 ಮತ್ತು 14 ಇವರ ಸಮಕ್ಷಮ ನಿಪಿ-4 ರ ಪಂಚನಾಮೆ ಬರೆದಿದ್ದು, ನಿಪಿ-4 ರಲ್ಲಿರುವ ನನ್ನ ಸಹಿ **ನಿಶಾನೆ ಪಿ-4(ಡಿ)** ಎಂದು ಗುರುತಿಸಿದ್ದೇನೆ. ಆಗ ತೆಗೆದಿದ್ದ ಪೋಟೋಗಳು ನಿಪಿ-5 ಮತ್ತು 6. ಅದೇ ದಿನ ಚಾಸಾ-1 ಇವರ ಮರುಹೇಳಿಕೆ, ಚಾಸಾ-2 ಮತ್ತು 11 ಇವರ ಹೇಳಿಕೆಗಳನ್ನು ಪಡೆದಿದ್ದೆ. ಚಾಸಾ-2 ಇವರು ನನ್ನ ಮುಂದೆ ನಿಪಿ-13 ರಂತೆ ಹೇಳಿಕೆ ನೀಡಿದ್ದರು.

4) ತಾರೀಕು 28-02-2022 ರಂದು ಚಾಸಾ-3 ರಿಂದ 5 ಇವರ ಹೇಳಿಕೆಗಳನ್ನು ಪಡೆದಿದ್ದೆ. ಚಾಸಾ-3 ಇವರು ನನ್ನ ಮುಂದೆ ನಿಪಿ-7 ರಂತೆ, ಚಾಸಾ-4, ನಿಪಿ-10 ರಂತೆ, ಚಾಸಾ-5, ನಿಪಿ-11 ರಂತೆ ಹೇಳಿಕೆ ನೀಡಿದ್ದಾರೆ.

5) ದಿನಾಂಕ 01-03-2022 ರಂದು ಚಾಸಾ-6 ರಿಂದ 9 ರವರ ಹೇಳಿಕೆಗಳನ್ನು ಪಡೆದಿದ್ದೆ. ಚಾಸಾ-9 ರವರು ನನ್ನ ಮುಂದೆ ನಿಪಿ-12 ರಂತೆ ಹೇಳಿಕೆ ನೀಡಿದ್ದರು.

6) ದಿನಾಂಕ 10-03-2022 ರಂದು ಚಾಸಾ-17 ಇವರು ನಿಪಿ-14 ರಂತೆ ಚಾಸಾ-1 ಇವರ ತಪಾಸಣಾ ವರದಿಯನ್ನು ನೀಡಿದ್ದರು. ದಿನಾಂಕ 11-03-2022 ರಂದು ಚಾಸಾ-15 ರವರು, ಚಾಸಾ-1 ಇವರ ಜಾತಿ ಪ್ರಮಾಣ ಪತ್ರವನ್ನು ನೀಡಿದ್ದರು. ಸದರಿ ಜಾತಿ ಪ್ರಮಾಣ ಪತ್ರವನ್ನು ಈಗ ನೋಡಿ ಅದನ್ನು **ನಿಶಾನೆ ಪಿ -21** ಎಂದು ಗುರುತಿಸಿದ್ದೇನೆ.

7) ದಿನಾಂಕ 12-03-2022 ರಂದು ಚಾಸಾ-16 ರವರು ಚಾಸಾ-1 ಇವರು ಪ್ರಥಮ ಬಾರಿಗೆ ಚಿಕಿತ್ಸೆ ಪಡೆದ ಬಗ್ಗೆ ವೈದ್ಯಕೀಯ ತಪಾಸಣೆಯ ದಾಖಲಾತಿ ನಿಪಿ-16 ಮತ್ತು 17 ನ್ನು ನೀಡಿದ್ದರು.

8) ದಿನಾಂಕ 14-03-2022 ರಂದು ಚಾಸಾ-20 ಇವರು ಅಲ್ಲಿಯವರೆಗೇ ಕೈಗೊಂಡ ತನಿಖೆಯಲ್ಲಿ ಸಂಗ್ರಹಿಸಿದ್ದ ನಿಶಾನೆ ಪಿ-9 ರ ದಾಖಲೆಗಳನ್ನು ನಿಶಾನೆ ಪಿ-8 ರ

ವಿವರಗಳೊಂದಿಗೆ ಪಡೆದು ತನಿಖೆಗೆ ಅಳವಡಿಸಿಕೊಂಡಿದ್ದೆ. ಅದೇ ದಿನ ಚಾಸಾ-10 ಇವರ ಹೇಳಿಕೆಯನ್ನು ಪಡೆದಿದ್ದೆ.

9) ದಿನಾಂಕ 01-04-2022 ರಂದು ಆರೋಪಿತನು ನ್ಯಾಯಾಲಯದ ಆದೇಶದಂತೆ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿದ್ದರು. ಆತನ ಮೇಲೆ ದಸ್ತಗಿರಿ ಕ್ರಮ ಜರುಗಿಸಿ, ಜಾಮೀನು ಪಡೆದು, ಬಿಡುಗಡೆ ಮಾಡಿದ್ದೆ.

10) ದಿನಾಂಕ 09-04-2022 ರಂದು ಚಾಸಾ-15 ಇವರಿಂದ ಆರೋಪಿತನ ಜಾತಿ ಪ್ರಮಾಣ ಪತ್ರವನ್ನು ಪಡೆದಿದ್ದೆ. ಸದರಿ ಜಾತಿ ಪ್ರಮಾಣ ಪತ್ರವನ್ನು ಈಗ ನೋಡಿ ಅದನ್ನು **ನಿಶಾನೆ ಪಿ-22** ಎಂದು ಗುರುತಿಸಿದ್ದೇನೆ. ಅದೇ ದಿನ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸಲ್ಲಿಸಲು ಪೊಲೀಸ್ ಅಧೀಕ್ಷಕರ ಮೂಲಕ ಕೋರಿಕೊಂಡಿದ್ದೆ. ಅದಕ್ಕಾಗಿ ಹೊರಡಿಸಿದ ಜ್ಞಾಪನವನ್ನು ಈಗ ನೋಡಿ ಅದನ್ನು **ನಿಶಾನೆ ಪಿ-23** ಎಂದು ಗುರುತಿಸಿದ್ದೇನೆ. ಅದರಂತೆ ಆರೋಪಿಯ ಮೇಲೆ ತನಿಖೆಯ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

11) ಈ ತನಿಖೆಯು ಸಮಯದಲ್ಲಿ ಈ ಆರೋಪಿಯ ತಾರೀಕು 25-02-2022 ರ ದೂರಿನಂತೆ ಈ ಪಿರ್ಯಾಧಿಯೊಂದಿಗೆ ದಾಖಲಾಗಿದ್ದ ಪಡುಬಿದ್ರೆ ಠಾಣೆಯ ಗುನ್ನೆ ನಂಬ್ರ 21/22 ರ ತನಿಖೆಯನ್ನು ಸಹ ನಾನೇ ಪಡೆದು ಮುಂದುವರಿಸಿದ್ದೆ. ಆ ತನಿಖೆಯಲ್ಲಿ ''ಬಿ'' ಅಂತಿಮ ವರದಿ ಸಲ್ಲಿಸಿದ್ದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.

**ಪಾಟೀಸವಾಲು: ಆರೋಪಿಯ ಪರವಾಗಿ ಶ್ರೀ ಟಿ.ವಿ.ಕೆ.ಎಸ್. ವಕೀಲರಿಂದ**

1) ಈ ಆರೋಪಿಯ ಮೇಲೆ ದೂರು ದಾಖಲಿಸುವ ಮೊದಲೇ, ಆರೋಪಿಯು ಈ ಪಿರ್ಯಾಧಿದಾರರ ಮೇಲೆ ದೂರನ್ನು ನೀಡಿದ್ದರು ಎಂದರೆ ನಿಜ. ದೂರು ಮತ್ತು ಪ್ರತಿದೂರುಗಳ ತನಿಖೆಯನ್ನು ಒಂದೇ ತನಿಖಾಧಿಕಾರಿ ಮಾಡುವ ಅವಕಾಶ ಇಲ್ಲ ಎಂದರೆ ಸರಿಯಲ್ಲ. ದೂರು ಮತ್ತು ಪ್ರತಿದೂರುಗಳ ತನಿಖೆಯನ್ನು ನಾನು ಒಬ್ಬನೇ ಮಾಡಿ ಆರೋಪಿಗೆ ಅನ್ಯಾಯ ಮಾಡಿದ್ದೇನೆ ಎಂದರೆ ಸರಿಯಲ್ಲ.

2) ನಿಶಾನೆ ಪಿ-2ರ ಜಾಗೆಯ ಸುತ್ತಲೂ ಬೇರೆ ಬೇರೆಯವರ ಜಮೀನುಗಳು ಇವೆ ಎಂದರೆ, ನಿಜ. ನಿ.ಪಿ-2ರ ಜಾಗೆಗೆ ನಾನು ಕಂದಾಯ ಇಲಾಖೆಯ ಅಧಿಕಾರಿಗಳನ್ನು ಕರೆದುಕೊಂಡು ಹೋಗಿಲ್ಲ ಎಂದರೆ ನಿಜ. ನಿ.ಪಿ-2ರ ಜಾಗೆಯ ಅಕ್ಕಪಕ್ಕದ ಜಮೀನುಗಳ ಸರ್ವೆ ನಂಬ್ರ ನನಗೆ ಗೊತ್ತಿಲ್ಲ ಎಂದರೆ, ನಿಜ. ನಿಪಿ-2 ಮತ್ತು ನಿಪಿ-20ರ ದಾಖಲೆಗಳನ್ನು ಠಾಣೆಯಲ್ಲಿಯೇ ನಾನು ಸಿಬ್ಬಂದಿಗಳೊಂದಿಗೆ ಸೇರಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-2ರಲ್ಲಿ ಹೇಳಿದ ದಿನಾಂಕದಂದು ಆ ಜಾಗೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಿಪಿ-20 ನ್ನು ಯಾರು ಬರೆದಿದ್ದಾರೆ ಎಂದು ಅದರಲ್ಲಿ ಮಾಹಿತಿ ಇಲ್ಲ ಎಂದರೆ ನಿಜ.

3) ನಿಶಾನೆ ಪಿ-6ರ ಮೊಬೈಲ್ ನ್ನು ಚಾಸಾ-1, ನಿಪಿ-2 ಸಮಯದಲ್ಲಿ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-6ರ ಮೊಬೈಲ್ ನ್ನು, ನಿಪಿ-2ರ ಜಾಗೆಯಲ್ಲಿ ನೋಡಿಲ್ಲ ಎಂದರೆ ನಿಜ. ನಿಪಿ-8 ಮತ್ತು 9ರ ದಾಖಲೆಗಳನ್ನು ಪಂಚಾಯಿತಿಯೊಂದಿಗೆ ಸೇರಿ ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-6ರಲ್ಲಿಯ ಎಂಓ-1ರ ಮೊಬೈಲ್ ನ್ನು ತನಿಖೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ. ನಿಪಿ-2ರ ಪಂಚನಾಮೆಯನ್ನು ನಿಪಿ-20ರ ನಕಾಶೆಗಾಗಿ ಸೃಷ್ಟಿಸಿದೆ ಎಂದರೆ ಸರಿಯಲ್ಲ.

4) ಚಾಸಾ-16 ಮತ್ತು 17 ಇವರ ಮುಂದೆ, ಚಾಸಾ-1 ಇವರು ಬೇರೆ ಸಮಯಗಳನ್ನು ಹೇಳಿದ್ದಾರೆ ಎಂದರೆ, ಇರಬಹುದು. ನಿಶಾನೆ ಪಿ-19 ಮತ್ತು 23ರ ಆದೇಶಗಳನ್ನು ನಾನು ಪಡೆದ ಸಮಯ ದಾಖಲಿಸಿಲ್ಲ ಎಂದರೆ ನಿಜ. ನಿಪಿ-23ರ ಆದೇಶವನ್ನು ಅಂತಿಮ ವರದಿಗಾಗಿ ಪಡೆದುಕೊಂಡಿದ್ದು ಎಂದರೆ ನಿಜ.

5) ಚಾಸಾ-3, 4, 2, 5, 9, ನಿಪಿ-7, 10, 13, 11, 12, ರಂತೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಮೇಲೆ ಅಂತಿಮ ವರದಿಯನ್ನು ಬರೆಯಲು ಸಾಕಷ್ಟು ಅಂಶಗಳು ಇರದೇ ಇದ್ದರೂ, ಪಿರ್ಯಾಧಿದಾರರಿಗೆ ಸಹಾಯ

ಮಾಡಲು ಈ ವರದಿ ಬರೆದಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-14 ಮತ್ತು 16 ರಲ್ಲಿ ಸಮಯದ ವ್ಯತ್ಯಾಸ ಇದ್ದರೂ ಸಹ, ಒಂದು ತಪ್ಪು ವರದಿಯನ್ನು ಬರೆದಿದ್ದೇನೆ ಎಂದರೆ ಸರಿಯಲ್ಲ.

- ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.